### ಬಜೆಟ್‌ಗೆ ಮೀಸಲಿಟ್ಟ 2.34 ಲಕ್ಷ ಕೋಟಿ ಹಣ ಸರಿಯಾಗಿ ಬಳಕೆಯಾಗುತ್ತಿಲ್ಲ: ಮಾಜಿ ಸಿಎಂ ಸಿದ್ದರಾಮಯ್ಯ

# ವಿಧಾನಮಂಡಲ ಕಲಾಪ ಕಡಿತಗೊಳಿಸಿರುವುದು ಒಳ್ಳೆ ಬೆಳವಣಿಗೆಯಲ್ಲ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ವಿಧಾನಮಂಡಲ ಕಲಾಪ ಕನಿಷ್ಠ 60 ದಿನ ನಡೆಯಬೇಕು. ಆದರೆ, ಕೇವಲ 17 ರಿಂದ 18 ದಿನಗಳಿಗೆ ಕಲಾಪ ಸೀಮಿತಗೊಳಿಸಿರುವುದು ಪ್ರಜಾಪ್ರಭುತ್ವದ ದೃಷ್ಟಿಯಿಂದ ಉತ್ತಮ ಬೆಳವಣಿಗೆಯಲ್ಲ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ವಿಷಾದ ವ್ಯಕ್ತಪಡಿಸಿದ್ದಾರೆ.

ಪ್ರೆಸ್‌ಕ್ಲಬ್ ಸಭಾ ಭವನದಲ್ಲಿ ಹಿರಿಯ ಪತ್ರಕರ್ತ ಎಸ್.ಚಂದ್ರಶೇಖರ ರಾವ್ ವಿರಚಿತ 'ನೆನಪು ಮಾಸುವ ಮುನ್ನ' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿ, ಸರಕಾರ ದಲ್ಲಿ 2.34 ಲಕ್ಷ ಕೋಟಿ ಹಣ ಬಜೆಟ್‌ಗೆ ಮೀಸಲಿರಿಸಿದ್ದು, ಅದರ ಬಳಕೆ ಸರಿಯಾಗಿ ಆಗುತ್ತಿಲ್ಲ. ಈ ಕುರಿತು ಸುದೀರ್ಘ ಚರ್ಚೆ ಗಳು ನಡೆಯಬೇಕಿದೆ ಎಂದರು.

ಅಧಿಕಾರಿಗಳು ಹಾಗೂ ಆಡಳಿತ ಪಕ್ಷಕ್ಕೆ ಜನರ ಕಷ್ಟಗಳಿಗೆ ಸ್ಪಂದಿಸುವ ಆಸಕ್ತಿ ಇಲ್ಲವಾಗಿದೆ. ಇದು ಅಪಾಯಕಾರಿ ಬೆಳವಣಿಗೆ. ಇಂತಹ ಧೋರಣೆ ಸರಿಯಲ್ಲ. ಪ್ರಸ್ತುತ ವಿವಾದದಲ್ಲಿರುವ ಪೌರತ್ವ ಕಾಯಿದೆ ಕುರಿತು ಪುಸ್ತಕದಲ್ಲಿ ಕಾಣಬಹುದಾಗಿದ್ದು,



ಹಿರಿಯ ಪತ್ರಕರ್ತ ಎಸ್.ಚಂದ್ರಶೇಖರ ರಾವ್ ವಿರಚಿತ 'ನೆನಪು ಮಾಸುವ ಮುನ್ನ' ಪುಸ್ತಕವನ್ನು ಮಾಜಿ ಸಿಎಂ ಸಿದ್ದರಾಮಯ್ಯ ಬಿಡುಗಡೆಗೊಳಿಸಿದರು.

> ಲೇಖಕರ 'ನೆನಪು ಮಾಸುವ ಮುನ್ನ' ಕೃತಿಯು ನಿಜ ಘಟನೆ ಆಧಾರಿತವಾಗಿದ್ದು, ಇದರಲ್ಲಿ ಮಾನವೀಯ ಮೌಲ್ಯಗಳನ್ನು ಕಾಣಬಹುದಾಗಿದೆ. ಯಾವುದೇ ವೈಭವೀಕರಣವಿಲ್ಲದ ಈ ಕೃತಿಯು ಮನಷ್ಯನ ಮನಸ್ಸಿಗೆ ನೇರವಾಗಿ ತಟ್ಟುವ ಅದ್ಭುತ ಪುಸ್ತಕವಾಗಿದೆ.
>
> \- ಮುಖ್ಯಮಂತ್ರಿ ಚಂದ್ರು

ನಾವೆಲ್ಲರೂ ಏಕೆ ಪೌರತ್ವ ಕಾಯಿದೆ ವಿರೋಧಿಸಬೇಕು ಎಂಬುದನ್ನು ಸ್ಪಷ್ಟವಾಗಿ ಚಂದ್ರಶೇಖರ್ ರಾವ್ ತಿಳಿಸಿದ್ದಾರೆ. ಕೃತಿಯಲ್ಲಿ ಪ್ರಸಿದ್ಧ ರಾಜಕೀಯ ನಾಯಕರ ಬಗ್ಗೆಯೂ ಬರೆದಿದ್ದಾರೆ. ತಮಗೆ ಅನಿಸಿದ್ದನ್ನು ನೇರವಾಗಿ ಹೇಳುವ ಪ್ರವೃತ್ತಿಯನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು ಎಂದು ಹೇಳಿದ್ದರು.

ಸಂಪರ್ಕ ರಾಜಕಾರಣಿಗಳ ಒಡನಾಟ ಹಾಗೂ ವೃತ್ತಿ ಜೀವನದ ದೀರ್ಘಕಾಲದ ಅನುಭವಗಳನ್ನು ಪುಸ್ತಕ ರೂಪದಲ್ಲಿ ಅವರು ದಾಖಲಿಸಿದ್ದಾರೆ. ಈ ಅನುಭವಗಳು ಇನ್ನೊಬ್ಬರಿಗೆ ಮಾದರಿಯಾಗುತ್ತವೆ. ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದರೂ ದಲಿತರು ಹಾಗೂ ಮುಸ್ಲಿಮರ ಜತೆ ಒಡನಾಟ ಹೆಚ್ಚಿತ್ತು. ಚಿಕ್ಕಂದಿನಲ್ಲೇ ಜಾತಿ ವ್ಯವಸ್ಥೆಯನ್ನು ಬಿಟ್ಟು ಜ್ಯಾತ್ಯತೀತ ವ್ಯವಸ್ಥೆ ಅಳವಡಿಸಿಕೊಂಡು ಬಂದಿದ್ದಾರೆ. ಸರ್ವ ಧರ್ಮಗಳ ಏಕತೆ ಬಗ್ಗೆ ಅವರ ಚಿಂತನೆ ನಿಜಕ್ಕೂ ಪ್ರಶಂಸನೀಯ ಎಂದು ಹೇಳಿದರು.

## ರಾಜ್ಯಕ್ಕೆ ಅಮಿತ್ ಶಾ ಭೇಟಿ ನೀಡಿದ್ದು ಸುಳ್ಳು ಹೇಳಲು

ಬೆಂಗಳೂರು: ರಾಜ್ಯಕ್ಕೆ ಗೃಹಸಚಿವ ಅಮಿತ್ ಶಾ ಭೇಟಿ ನೀಡಿರುವುದು ಸುಳ್ಳು ಹೇಳುವುದಕ್ಕೆ ಹೊರತು ರಾಜ್ಯದ ಜನರ ಸಮಸ್ಯೆ ಬಗೆಹರಿಸಲು ಅಲ್ಲ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಹುಬ್ಬಳ್ಳಿಯಲ್ಲಿ ಅಮಿತ್ ಶಾ ಮಹದಾಯಿ ನದಿ ನೀರು ವಿಚಾರದ ಬಗ್ಗೆ ಸ್ಪಷ್ಟಪಡಿಸಬೇಕು. ಪ್ರವಾಹ ಪ್ರದೇಶಗಳಿಗೆ ಪರಿಹಾರ ಕೈಗೊಳ್ಳಲು ಕಡಿಮೆ ಅನುದಾನ ನೀಡಿರುವ ಬಗ್ಗೆ ಮಾತನಾಡಬೇಕು. ಬಿಜೆಪಿ ಸಂಸದ ತೇಜಸ್ವಿ ಸೂರ್ಯ, ಚಕ್ರವರ್ತಿ ಸೂಲಿಬೆಲೆ ಅವರ ಮೇಲೆ ಎಸ್‌ಡಿಪಿಐ ದಾಳಿ ಸಂಚು ವಿಚಾರವಾಗಿ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಯಾರ ಮೇಲೆ ದಾಳಿ ನಡೆದರೂ ಅದು ತಪ್ಪು. ಇದರಲ್ಲಿ ಪಕ್ಷಭೇದ ಮಾಡಬಾರದು, ದಾಳಿ ಯಾರ ಮೇಲೂ ನಡೆಯಬಾರದು. ಅದು ಕಾಂಗ್ರೆಸ್ ಇರಲಿ, ಬಿಜೆಪಿ ಇರಲಿ ಹೀಗೆ ನಡೆಯಬಾರದು. ಎಸ್‌ಡಿಪಿಐ ನಿಷೇಧದ ಬಗ್ಗೆ ತಮಗೆ ಗೊತ್ತಿಲ್ಲ. ಇದೇ ರೀತಿ ಆರ್‌ಎಸ್‌ಎಸ್ ಕೂಡ ಸಮಾಜ ವಿರೋಧಿ ಚಟುವಟಿಕೆ ನಡೆಸುತ್ತಿದೆ. ಹಾಗೆಂದು ಆರ್‌ಎಸ್‌ಎಸ್ ನಿಷೇಧಿಸಬೇಕು ಎಂದು ತಾವು ಹೇಳುವುದಿಲ್ಲ. ಶಾಸಕಾಂಗ ಮತ್ತು ವಿಪಕ್ಷ ನಾಯಕ ಸ್ಥಾನಗಳನ್ನು ಪ್ರತ್ಯೇಕಿಸುವುದು ಬೇಡ. ಈಗಾಗಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಾಗಿದೆ, ನಿರ್ಧಾರ ತೆಗೆದುಕೊಳ್ಳುವುದು ಹೈಕಮಾಂಡ್‌ಗೆ ಬಿಟ್ಟಿದ್ದು. ಮಹಾರಾಷ್ಟ್ರದ ರಾಜಕೀಯ ಸ್ಥಿತಿಯೇ ಬೇರೆ, ಕರ್ನಾಟಕದ ಸ್ಥಿತಿಯೇ ಬೇರೆ. ಕರ್ನಾಟಕವನ್ನು ಮಹಾರಾಷ್ಟ್ರಕ್ಕೆ ಹೋಲಿಸಬಾರದು ಎನ್ನುವುದು ತಮ್ಮ ವೈಯಕ್ತಿಕ ಅಭಿಪ್ರಾಯ ಎನ್ನುವ ಮೂಲಕ ಎರಡೂ ಸ್ಥಾನದಲ್ಲಿ ಮುಂದುವರಿಯುತ್ತೇನೆ. ಇಲ್ಲವೇ ಎರಡಕ್ಕೂ ರಾಜೀನಾಮೆ ಕೊಡುತ್ತೇನೆ. ಹಿಂದಿನ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಸಚಿವ ಸಂಪುಟ ವಿಸ್ತರಣೆ ವಿಳಂಬವಾಗಿರಲಿಲ್ಲ. ನಮಗೆ ಪಕ್ಷದ ವರಿಷ್ಠರು ಎಲ್ಲ ರೀತಿಯಲ್ಲೂ ಸಹಕಾರ ನೀಡಿದರು. ಆದರೆ ಸಂಪುಟ ವಿಸ್ತರಣೆ ಸಂಬಂಧ ಚರ್ಚಿಸಲು ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಸಮಯವನ್ನೇ ನೀಡಿಲ್ಲ, ಇದು ಬಿಜೆಪಿಯ ಸಂಸ್ಕೃತಿ ಎಂದರು.